ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಎನ್. ಅಪ್ಪಾಜಿ ಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : **1417**
ಉತ್ತರ ದಿನಾಂಕ : **18.03.2020**

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ವ್ಯಾಪಕ ಮಳೆ ಸುರಿದು, 110 ತಾಲ್ಲೂಕುಗಳಲ್ಲಿ ಪ್ರವಾಹ ಬಂದರೂ ಸಹ ಆಪರೇಷನ್ ವರ್ಷಧಾರೆ ಹೆಸರಿನಲ್ಲಿ ಮೋಡಬಿತ್ತನೆಗೆ ಸರ್ಕಾರ ಚಾಲನೆ ನೀಡಿದೆಯೇ;	ಮೋಡಬಿತ್ತನೆ ಕಾರ್ಯಾಚರಣೆಯನ್ನು ಮಳೆ ಪ್ರಮಾಣ ಕಡಿಮೆ ಇದ್ದ ಪ್ರದೇಶಗಳಲ್ಲಿ ಕೈಗೊಳ್ಳಲಾಗಿದೆ. ಪ್ರವಾಹ ಬಂದ ಮೇಲೆ ಕಾರ್ಯಾಚರಣೆ ನಡೆಸಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಈ ಯೋಜನೆಗೆ 2019–20ರಲ್ಲಿ ಎಷ್ಟು ಹಣವನ್ನು ನಿಗದಿ ಮಾಡಲಾಗಿತ್ತು ಮತ್ತು ಯಾವ ಸಂಸ್ಥೆಗೆ ಈ ಯೋಜನೆಯನ್ನು ಕಾರ್ಯಗತಗೊಳಿಸಲು ನಿಗಧಿ ಮಾಡಲಾಗಿತ್ತು; (ಸಂಪೂರ್ಣ ಮಾಹಿತಿ ನೀಡುವುದು)	2019ರ ಮೋಡಬಿತ್ತನೆ ಕಾರ್ಯಾಚರಣೆಗೆ ರೂ.45.00ಕೋಟಿ ನಿಗಧಿ ಮಾಡಲಾಗಿರುತ್ತದೆ. ಕಾರ್ಯಾಚರಣೆ ಕೈಗೊಳ್ಳಲು ಕೆ.ಟಿ.ಪಿ.ಪಿ ನಿಯಮಾನುಸಾರ ಟೆಂಡರ್ ಕರೆದು, ಗುತ್ತಿಗೆದಾರರಾದ M/s. Kyathi Climate Modification Consultants LLP ರವರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ.
ಇ)	2019–20 ಮತ್ತು 2020–21 ವರ್ಷಕ್ಕೆ ಮುಂದಿನ ವರ್ಷದ ಮುಂಗಾರು ಹಿಂಗಾರು ಮಳೆ ಬರುವುದಕ್ಕೆ ಮುಂಚಿತವಾಗಿ 2020–21ಕ್ಕೂ ಸಹ ಮೋಡ ಬಿತ್ತನೆಗೆ ಟೆಂಡರ್ ಕರೆಯಲಾಗಿದೆಯೇ; ಈ ಟೆಂಡರ್‌ನಲ್ಲಿ ಎಷ್ಟು ಕಂಪನಿಗಳು/ಸಂಸ್ಥೆಗಳು ಭಾಗಿಯಾಗಿದ್ದವು; (ವಿವರ ನೀಡುವುದು)	2019ನೇ ವರ್ಷಕ್ಕೆ ಹಾಗೂ 2020ನೇ ವರ್ಷಕ್ಕೆ ಮೋಡ ಬಿತ್ತನೆ ಕಾರ್ಯಾಚರಣೆಯನ್ನು ಕೈಗೊಳ್ಳಲು ಟೆಂಡರ್ ಕರೆಯಲಾಗಿದೆ. 2020ನೇ ವರ್ಷದಲ್ಲಿ ಮೋಡಬಿತ್ತನೆ ಕಾರ್ಯಾಚರಣೆಯನ್ನು ನಡೆಸುವ ಹಕ್ಕನ್ನು ಸರ್ಕಾರ ಹೊಂದಿದೆ. ಮಾರ್ಚ್–2020ರ ಅಂತ್ಯದ ಮೊದಲು ಗುತ್ತಿಗೆದಾರರಿಗೆ ತಿಳಿಸಲಾಗುವುದು ಎಂಬ ಷರತ್ತಿನೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ. ಟೆಂಡರ್‌ನಲ್ಲಿ ಒಟ್ಟು 02 ಕಂಪನಿಗಳು/ಸಂಸ್ಥೆಗಳು ಭಾಗವಹಿಸಿದ್ದವು. 1. M/s. Kyathi Climate Modification Consultants LLP 2. Jayaalaxmi Mineral Private Limited.
ಈ)	ಅಂತಿಮ ಟೆಂಡರ್ ಅನ್ನು ಯಾವ ಕಂಪನಿಯು ಪಡೆದುಕೊಂಡಿತ್ತು, ಆ ಸಂಸ್ಥೆಯ/ಕಂಪನಿಯ ಹೆಸರೇನು ಈ ಕಂಪನಿ ಯಾರಿಗೆ ಸೇರಿದ್ದು, ಸಂಪೂರ್ಣ ಮಾಹಿತಿ ನೀಡುವುದು;	2019ನೇ ಹಾಗೂ 2020ನೇ ವರ್ಷಕ್ಕೆ ಮಳೆಗಾಲದಲ್ಲಿ ಮೋಡಬಿತ್ತನೆ ಕಾರ್ಯಾಚರಣೆಯನ್ನು ಕೈಗೊಳ್ಳಲು ಕೆ.ಟಿ.ಪಿ.ಪಿ ನಿಯಮಾನುಸಾರ ಟೆಂಡರ್ ಕರೆದು, ಗುತ್ತಿಗೆದಾರರಾದ M/s. Kyathi Climate Modification Consultants LLP ರವರೊಂದಿಗೆ ಕರಾರು ಮಾಡಿಕೊಳ್ಳಲಾಗಿದೆ. ಸದರಿ ಸಂಸ್ಥೆಯ ಮ್ಯಾನೇಜಿಂಗ್ ಪಾರ್ಟನರ್ ಶ್ರೀ ಪ್ರಕಾಶ್ ಕೆ.ಕೆ ರವರಾಗಿರುತ್ತಾರೆ.
ಉ)	ಈ ಹಿಂದೆ ಮೋಡ ಬಿತ್ತನೆ ಮಾಡಿದ್ದು, ಈ ಬಿತ್ತನೆಯ ಯೋಜನೆ ಫಲ ನೀಡಿರುವ ಬಗ್ಗೆ ವೈಜ್ಞಾನಿಕ ವರದಿ ಇಲ್ಲದಿದ್ದರೂ ಸಹ ಈ ದುಂದು ವೆಚ್ಚದ ಯೋಜನೆಯನ್ನು ಸರ್ಕಾರ ಯಾರ ಹಿತಕ್ಕಾಗಿ ಕೈಗೊಂಡಿತ್ತು ಎಂಬುದರ ಬಗ್ಗೆ ಪೂರ್ಣ ದಾಖಲೆಗಳೊಂದಿಗೆ ಮಾಹಿತಿ ನೀಡುವುದು?	ಈ ಹಿಂದೆ 2017ರ ಕಾರ್ಯಾಚರಣೆಯನ್ನು ವಿಷಯ ತಜ್ಞರನ್ನೊಳಗೊಂಡ ತಂಡವು ವೈಜ್ಞಾನಿಕವಾಗಿ ಮೌಲ್ಯಮಾಪನ ನಡೆಸಿ ವರದಿ ಮಾಡಿದೆ. ಮೋಡಬಿತ್ತನೆ ಮಾಡಿದ ಸ್ಥಳಗಳಲ್ಲಿ ಉತ್ತಮ ಮಳೆಯಾಗಿದೆ ಹಾಗೂ ನೈಸರ್ಗಿಕ ಮಳೆಗಿಂತ ಶೇ.27.90ರಷ್ಟು ಹೆಚ್ಚು ಮಳೆಯಾಗಿದೆ ಎಂದು ವರದಿ ಮಾಡಿದ್ದಾರೆ.

ಸಂ.ಗ್ರಾಕುನೀ&ನೈಇ/128/ಗ್ರಾನೀಸ(5)/2020

(ಕೆ. ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು